# ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಸಿ.ಟಿ.ರವಿ, ಶ್ರೀ ಎಸ್. ವ್ಹಿ. ಸಂಕನೂರ ಹಾಗೂ ಇತರರು ನಿಯಮ 72ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

*********

**ಪ್ರಶ್ನೆ:-**

ಮೈಸೂರು ರಾಜ್ಯ ವಕ್ಫ್ ಮಂಡಳಿಯು ಮೈಸೂರು ರಾಜ್ಯ ಗೆಜೆಟ್‌ನಲ್ಲಿ ದಿನಾಂಕ:22.10.1964 ರಂದು ಪ್ರಕಟಿಸಿರುವ ಗೆಜೆಟ್ ನೋಟಿಫಿಕೇಷನ್‌ನಲ್ಲಿ ಚಿಕ್ಕಮಗಳೂರು ನಗರದ ಕೆಲವು ವಕ್ಫ್ ಆಸ್ತಿಗಳ ಬಗ್ಗೆ ಸುಳ್ಳು ಮಾಹಿತಿಯನ್ನು ಪ್ರಕಟಿಸಿದೆ. ಸದರಿ ಗೆಜೆಟ್‌ನ ಕ್ರಮ ಸಂಖ್ಯೆ:38ರಲ್ಲಿ ರತ್ನಗಿರಿ ದರ್ಗಾ (ಸೈಯದ್ ರಹಮತುಲ್ಲಾ ಶಾ ಖಾದ್ರಿ) ರಾಮನಹಳ್ಳಿ ಎಂದು ಪ್ರಕಟಿಸಲಾಗಿದ್ದು, ಚಿಕ್ಕಮಗಳೂರು ನಗರದಲ್ಲಿ ಎಲ್ಲಿಯೂ ಈ ದರ್ಗಾ ಅಸ್ತಿತ್ವದಲ್ಲಿ ಇರುವುದಿಲ್ಲ. ಇದೇ ರೀತಿ ಕ್ರಮ ಸಂಖ್ಯೆ:36 ರಲ್ಲಿ ಚಿಕ್ಕಮಗಳೂರು ಹನುಮಂತಪ್ಪ ವೃತ್ತದ ಸಮೀಪ ಇರುವ ಬಡಾಮಕಾನ್ (ಸೈಯದ್ ಮಜಹರ್ ಅಲಿ ಶಾ ಖಾದ್ರಿ ದರ್ಗಾ) ವನ್ನು ಸಹ ಪ್ರಕಟಿಸಲಾಗಿದೆಯಾದರೂ ಅದರಲ್ಲಿ ಈ ದರ್ಗಾಕ್ಕೆ ಇರುವ ಆಸ್ತಿಯ ವಿಸ್ತೀರ್ಣದ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿರುವುದಿಲ್ಲ. ವಕ್ಫ್ ಬೋರ್ಡಿಗೆ ಯಾವುದೇ ಒಂದು ಆಸ್ತಿಯನ್ನು ಸೇರಿಸಿಕೊಳ್ಳಬೇಕಾದಲ್ಲಿ ಸದರಿ ಆಸ್ತಿಯ ಮೂಲ ಮಾಲೀಕರ ಹಿಂದಿನ ದಾಖಲಾತಿಗಳು ಹಾಗೂ ಅವರು ದಾನ ನೀಡಿದಲ್ಲಿ ದಾನ ಮಾಡಿರುವಂತಹ ದಾಖಲಾತಿಗಳು, ವಕ್ಫ್ ಬೋರ್ಡ್‌ಗೆ ದಾನ ಮಾಡಿರುವಂತಹ ದಾಖಲಾತಿಗಳು ಮತ್ತು ಪುರಸಭೆ-ಪಂಚಾಯತಿ ಅಥವಾ ನಗರಸಭೆಯಿಂದ ಆ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪಡೆದ ನಂತರ ಅದನ್ನು ಪರಿಶೀಲಿಸಿ ಆನಂತರ ನೋಟಿಫಿಕೇಷನ್ ಮಾಡಬೇಕಾಗುತ್ತದೆ. ಈ ಎಲ್ಲಾ ಮಾನದಂಡಗಳನ್ನು ಅನುಸರಿಸದೆ ಕೇವಲ ಗೆಜೆಟ್ ನೋಟಿಫಿಕೇಷನ್‌ನಲ್ಲಿ ಹೆಸರು ಸೇರ್ಪಡೆ ಮಾಡಿರುವುದು ಕಾನೂನು ಬಾಹಿರವಾಗಿದೆ. ಈ ಎರಡೂ ಪ್ರಕರಣಗಳನ್ನು ಗಮನಿಸಿದಲ್ಲಿ ಸದರಿ ಗೆಜೆಟ್ ಪ್ರಕಟಣೆ ಕುರಿತು ಸಂದೇಹಗಳು ಉಂಟಾಗಿದೆ. ಸರ್ಕಾರ ಸ್ಪಷ್ಟ ನಿರ್ಧಾರ ತೆಗೆದುಕೊಂಡು ಕಾನೂನುಬಾಹಿರವಾಗಿ ಗೆಜೆಟ್‌ನಲ್ಲಿ ಸೇರ್ಪಡೆ ಮಾಡಿರುವ ಆಸ್ತಿಗಳನ್ನು ಗೆಜೆಟ್ ನೋಟಿಫಿಕೇಷನ್ ನಿಂದ ಕೈಬಿಡಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಉತ್ತರ:-**

**ಪ್ರಕರಣ 01**:

ಚಿಕ್ಕಮಗಳೂರು ನಗರ ರತ್ನಗಿರಿ, ರಾಮನಹಳ್ಳಿನಲ್ಲಿರುವ ಹಜರತ್ ಸೈಯದ್ ರಹಮತುಲ್ಲಾ ಶಾ ಖಾದ್ರಿ ದರ್ಗಾವು ಮೈಸೂರು ಗೆಜೆಟ್ ಸಂಖ್ಯೆ: MWB 19 (10)/64, ದಿನಾಂಕ: 03.10.1964ರ ಕ್ರ.ಸಂ.38 ರಲ್ಲಿ ಪ್ರಕಟಗೊಂಡಿದ್ದು ಇದು ವಕ್ಫ್ ಆಸ್ತಿಯಾಗಿರುತ್ತದೆ. ಸರ್ವೆ ವರದಿ ಪ್ರಕಾರ ಈ ಆಸ್ತಿಯನ್ನು ವಕ್ಫ್ ಕಾಯ್ದೆ 1954ರ ಕಲಂ 4 ರಂತೆ ಮೈಸೂರು ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: RD 8 CWF 61, ದಿನಾಂಕ:14.02.1962ರಲ್ಲಿ ನೇಮಕವಾದ ಸರ್ವೆ ಸಹಾಯಕ ಆಯುಕ್ತರು ಸರ್ವೆಮಾಡಿ ದಿನಾಂಕ: 25.04.1963ರಂದು ದೃಢೀಕರಿಸಿರುತ್ತಾರೆ.

ಮೇಲ್ಕಂಡ ಆಸ್ತಿಯು ಸುಮಾರು ವರ್ಷದಿಂದ ದರ್ಗಾವಾಗಿದ್ದು, ಅಲ್ಲಿ ಜಿಯಾರತ್ ಮತ್ತು ಫಾತೇಹಗಾಗಿ ಭಕ್ತಾದಿಗಳು ತಲ ತಲಾಂತರದಿಂದ ಭೇಟಿ ನೀಡುತ್ತಿದ್ದುದರಿಂದ ಇದನ್ನು ವಕ್ಫ್ ಗೆಟೆಜ್ ನೋಟಿಪಿಕೇಷನ್ ನಲ್ಲಿ ಸೇರಿಸಲಾಗಿದೆ. ಇದನ್ನು ದೃಢೀಕರಿಸಲು ದಿನಾಂಕ:25.04.1963 ರಲ್ಲಿ ಮಾಡಿರುವ ಮಹಜರ್‌ರಲ್ಲಿ ಸುಮಾರು ಭಕ್ತಾದಿಗಳು ಸಹಿಯನ್ನು ಮಾಡಿರುತ್ತಾರೆ.

......2

ಈ ದರ್ಗಾವು ಬೋರ್ಡ್ ಆಫ್ ಟ್ರಸ್ಟ್ ಮುಸ್ಲಿಂ ಎಂಡೋಮೆಂಟಿನ ಅಧ್ಯಕ್ಷರಾದ ಜಿ.ಎಸ್.ಗುಲಾಮ್ ಮೊಹಮ್ಮದ್ ರವರ ಸುಪರ್ದಿನಲ್ಲಿ ಇದ್ದಿದ್ದು, ಸದರಿ ಆಸ್ತಿಯನ್ನು ಸರ್ವೆ ಆಯುಕ್ತರು ಸರ್ವೆ ಮಾಡಿ ನೀಡಿರುವ ಸರ್ವೆ ವರದಿಯ ಪ್ರಕಾರ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ವಕ್ಫ್ ಕಾಯ್ದೆ 1954 ಕಲಂ 5(2)ರಂತೆ ಅಧಿಸೂಚನೆ ಸಂಖ್ಯೆ:MWB 19(10)/64, ದಿನಾಂಕ:03.10.1964 ರಲ್ಲಿ ಪ್ರಕಟಿಸಲಾಗಿರುತ್ತದೆ. ಗೆಟೆಜ್ ಪ್ರಕಟಣೆ ಕುರಿತು ಸಂದೇಹಗಳು ಉಂಟಾಗಿರುವುದನ್ನು ಒಪ್ಪಲಾಗದು ಹಾಗೂ ಇದು ಯಾವುದೇ ಕಾರಣಕ್ಕೂ ಕಾನೂನು ಬಾಹಿರವಾಗಿ ಗೆಜೆಟ್‌ನಲ್ಲಿ ಸೇರ್ಪಡೆ ಮಾಡಿರುವ ಆಸ್ತಿಗಳಲ್ಲ.

**ಪ್ರಕರಣ 02**:

ಚಿಕ್ಕಮಗಳೂರು ನಗರದಲ್ಲಿರುವ ಬಡಾಮಕಾನ್-ಸೈಯದ್ ಮಜಹರ್ ಅಲಿ ಶಾ ಖಾದ್ರಿ ಮಕಾನ್ ಮೈಸೂರು ಗೆಜೆಟ್ ಸಂಖ್ಯೆ: MWB 19(10)/64, ದಿನಾಂಕ: 03.10.1964ರ ಕ್ರ.ಸಂ.36ರಲ್ಲಿ ಪ್ರಕಟಗೊಂಡಿದ್ದು, ಇದು ವಕ್ಫ್ ಆಸ್ತಿಯಾಗಿರುತ್ತದೆ. ಸರ್ವೆ ವರದಿ ಪ್ರಕಾರ ಈ ಆಸ್ತಿಯನ್ನು ವಕ್ಫ್ ಕಾಯ್ದೆ 1954ರ ಕಲಂ 4 ರಂತೆ ಮೈಸೂರು ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:RDC 5 MRC 57, ದಿನಾಂಕ: 17.12.1957ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹೊರಡಿಸಿದ ಅಧಿಸೂಚನೆ ಸಂಖ್ಯೆ: RD 8 CWF 61, ದಿನಾಂಕ:14.02.1962ರಲ್ಲಿ ನೇಮಕವಾದ ಸರ್ವೆ ಸಹಾಯಕ ಆಯುಕ್ತರು ಸರ್ವೆ ಮಾಡಿ ದಿನಾಂಕ: 25.04.1963 ರಂದು ದೃಢೀಕರಿಸಿರುತ್ತಾರೆ.

ಸದರಿ ಮಕಾನ್ ಸುಮಾರು 1949ರ ಪೂರ್ವದಿಂದ ಮಕಾನ್ ಆಗಿದ್ದು, ಇದು ಬೋರ್ಡ್ ಆಫ್ ಟ್ರಸ್ಟ್ ಮುಸ್ಲಿಂ ಎಂಡೋಮೆಂಟಿನ ಅಧ್ಯಕ್ಷರಾದ ಜಿ.ಎಸ್.ಗುಲಾಮ್ ಮೊಹಮ್ಮದ್ ರವರ ಸುಪರ್ದಿನಲ್ಲಿ ಇದ್ದಿದ್ದು ಸರಿಯಷ್ಟೆ. ಇದನ್ನು ದೃಢೀಕರಿಸಲು ದಿನಾಂಕ: 25.04.1963 ರಲ್ಲಿ ಮಾಡಿರುವ ಮಹಜರ್‌ರಲ್ಲಿ ಸುಮಾರು ವ್ಯಕ್ತಿಗಳು ಸಹಿಯನ್ನು ಮಾಡಿರುತ್ತಾರೆ.

ಈ ಬಗ್ಗೆ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ನ್ಯಾಯಲಯದ ಪ್ರಕರಣ ಸಂಖ್ಯೆ: PR.865.C4588/54-55 ಬೋರ್ಡ್ ಆಫ್ ಟ್ರಸ್ಟ್ ಮುಸ್ಲಿಂ ಎಂಡೋಮೆಂಟಿನ ಕಾರ್ಯದರ್ಶಿಗಳು, ಟೌನ್ ಮುನಿಸಿಪಲ್, ಚಿಕ್ಕಮಗಳೂರು ರವರ ವಿರುದ್ಧ ದಾಖಲಿಸಿದ್ದು, ಈ ಪ್ರಕರಣದಲ್ಲಿ ಮಕಾನ್ ಆಸ್ತಿಯು ಬೋರ್ಡ್ ಆಫ್ ಟ್ರಸ್ಟ್ ಮುಸ್ಲಿಂ ಎಂಡೋಮೆಂಟಿನವರಿಗೆ ಸೇರಿರುವ ಆಸ್ತಿಯಂದು ಆದೇಶಿಸಿರುತ್ತಾರೆ.

ಈ ಬಡಾಮಕಾನ್ ಜಾಗವು ಬೋರ್ಡ್ ಆಫ್ ಟ್ರಸ್ಟ್ ಮುಸ್ಲಿಂ ಎಂಡೋಮೆಂಟಿನ ಅಧ್ಯಕ್ಷರಾದ ಜಿ.ಎಸ್.ಗುಲಾಮ್ ಮೊಹಮ್ಮದ್ ರವರ ಸುಪರ್ದಿನಲ್ಲಿ ಇದ್ದಿದ್ದು, ಸದರಿ ಆಸ್ತಿಯನ್ನು ಸರ್ವೆ ಆಯುಕ್ತರು ಸರ್ವೆ ಮಾಡಿ ನೀಡಿರುವ ಸರ್ವೆ ವರದಿಯ ಪ್ರಕಾರ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ವಕ್ಫ್ ಕಾಯ್ದೆ 1954 ಕಲಂ 5(2)ರಂತೆ ಅಧಿಸೂಚನೆ ಸಂಖ್ಯೆ: MWB 19(10)/64, ದಿನಾಂಕ:03.10.1964 ರಲ್ಲಿ ಪ್ರಕಟಿಸಲಾಗಿರುತ್ತದೆ. ಗೆಟೆಜ್ ಪ್ರಕರಣೆ ಕುರಿತು ಸಂದೇಹಗಳು ಉಂಟಾಗಿರುವುದನ್ನು ಒಪ್ಪಲಾಗದು.

ಮುಂದುವರೆದು ಪ್ರಕರಣ ಸಂಖ್ಯೆ: C.T.M/Licence/185/77-78 ರಲ್ಲಿ ಟೌನ್ ಮುನಿಸಿಪಲ್, ಚಿಕ್ಕಮಗಳೂರು ರವರು ಬಡಾಮಕಾನ್ ಜಾಗದಲ್ಲಿ ಕಟ್ಟಡ ಕಟ್ಟಲು ಪರವಾನಿಗೆ ನೀಡಿ ಆದೇಶಿಸಿರುತ್ತಾರೆ.

ಆದಕಾರಣ, ಅಧಿಸೂಚನೆಯಲ್ಲಿ ಪ್ರಕಟವಾಗಿರುವ ಆಸ್ತಿಗಳು ಯಾವುದೇ ಕಾರಣಕ್ಕೂ ಕಾನೂನು ಬಾಹಿರವಾಗಿ ಗೆಜೆಟ್‌ನಲ್ಲಿ ಸೇರ್ಪಡೆಮಾಡಿರುವ ಆಸ್ತಿಗಳಾಗಿರುವುದಿಲ್ಲ.

ಕಡತ ಸಂಖ್ಯೆ: MWD 176 LMQ 2024

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು